



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. *ಖಂಡಿತವಾಗಿಯೂ ಸತ್ಯವಿಶ್ವಾಸಿಗಳು ವಿಜಯಿಗಳಾದರು-

قَدْ اَفْلَحَ الْمُؤْمِنُوْنَ ۙ﴿١﴾

2. ಅವರು ತಮ್ಮ ನಮಾಝಿನಲ್ಲಿ ಭಯಭಕ್ತಿ ತೋರುತ್ತಾರೆ-

الَّذِيْنَ هُمْ فِيْ صَلَاتِهِمْ خٰشِعُوْنَ ۙ﴿٢﴾

3. ನಿರರ್ಥಕ ಕಾರ್ಯಗಳಿಂದ ದೂರವಿರುತ್ತಾರೆ-

وَالَّذِيْنَ هُمْ عَنِ اللَّغْوِ مُعْرِضُوْنَ ۙ﴿٣﴾

4. ಝಕಾತಿನ ನಿಯಮವನ್ನು ಪಾಲಿಸುತ್ತಾರೆ-

وَالَّذِيْنَ هُمْ لِلزَّكٰوةِ فٰعِلُوْنَ ۙ﴿٤﴾

5-6. ತಮ್ಮ ಪತ್ನಿಯರು ಹಾಗೂ ತಮ್ಮ ಅಧೀನವಿರುವ ದಾಸಿಯರ[1] ಹೊರತು ಇತರರಿಂದ ತಮ್ಮ ಗುಪ್ತಾಂಗಗಳನ್ನು ರಕ್ಷಿಸಿಕೊಳ್ಳು ತ್ತಾರೆ-[2] ಅವರಿಂದ ರಕ್ಷಿಸದಿದ್ದುದರಲ್ಲಿ ಅವರು ದೂಷಣೀಯರಲ್ಲ.

وَالَّذِيْنَ هُمْ لِفُرُوْجِهِمْ حٰفِظُوْنَ ۙ﴿٥﴾
اِلَّا عَلٰٓى اَزْوَاجِهِمْ اَوْ مَا مَلَكَتْ اَيْمَانُهُمْ
فَاِنَّهُمْ غَيْرُ مَلُوْمِيْنَ ۚ﴿٦﴾

7. ಆದರೆ ಇದರ ಹೊರತು ಇನ್ನೇನಾದರೂ ಬಯಸುವವರೇ ಅತಿರೇಕವೆಸಗುವವರು.

فَمَنِ ابْتَغٰى وَرَآءَ ذٰلِكَ فَاُولٰٓئِكَ
هُمُ الْعٰدُوْنَ ۚ﴿٧﴾

8. ತಮ್ಮ ವಿಶ್ವಸ್ಥ ಸೊತ್ತುಗಳನ್ನು ಹಾಗೂ ತಮ್ಮ ವಾಗ್ದಾನಗಳನ್ನು ಪಾಲಿಸುತ್ತಾರೆ-

وَالَّذِيْنَ هُمْ لِاَمٰنٰتِهِمْ وَعَهْدِهِمْ رٰعُوْنَ ۙ﴿٨﴾

***ಇಲ್ಲಿಂದ 18ನೆಯ ಕಾಂಡ ಆರಂಭ.**

1. ಅರ್ಥಾತ್- ಯುದ್ಧದಲ್ಲಿ ಸೆರೆಯಾಳುಗಳಾಗಿ ಸಿಗುವ ದಾಸಿಯರು. ಯುದ್ಧಕೈದಿಗಳ ವಿನಿಮಯ ನಡೆಯದಿದ್ದರೆ ಇಸ್ಲಾಮೀ ಸರ್ಕಾರದ ವತಿಯಿಂದ ಅವರನ್ನು ಯಾರದಾದರೂ ಒಡೆತನಕ್ಕೆ ಕೊಟ್ಟು ಬಿಡಲಾಗುತ್ತದೆ.

2. ಇದಕ್ಕೆ ಎರಡು ಅರ್ಥಗಳಿರಬಹುದು. ಮೊದಲನೆಯದಾಗಿ ತಮ್ಮ ದೇಹದ ಲಜ್ಜಾಂಗಗಳನ್ನು ಮರೆಸಿರುತ್ತಾರೆ. ಅರ್ಥಾತ್ ಅಶ್ಲೀಲತೆಯಿಂದ ದೂರವಿರುತ್ತಾರೆ ಮತ್ತು ತಮ್ಮ ಗುಪ್ತಾಂಗಗಳನ್ನು ಇತರರ ಮುಂದೆ ತೆರೆಯುವುದಿಲ್ಲ. ಎರಡನೆಯದಾಗಿ ಅವರು ತಮ್ಮ ಲಜ್ಜೆ ಮತ್ತು ಮಾನವನ್ನು ಸಂರಕ್ಷಿಸುತ್ತಾರೆ. ಅರ್ಥಾತ್ ಲೈಂಗಿಕ ವಿಷಯಗಳಲ್ಲಿ ಸ್ವಚ್ಛಂದರಾಗುವುದಿಲ್ಲ. ವಿಷಯಾಸಕ್ತಿ ಯನ್ನು ತೀರಿಸುವಲ್ಲಿ ಅನಿಯಂತ್ರಿತರಾಗಿ ಬಿಡುವುದಿಲ್ಲ.

9. ಮತ್ತು ತಮ್ಮ ನಮಾಝ್‌ಗಳನ್ನು ರಕ್ಷಿಸಿಕೊಳ್ಳುತ್ತಾರೆ.

وَالَّذِيْنَ هُمْ عَلٰى صَلَوٰتِهِمْ يُحَافِظُوْنَ ۞٩

10. ಇವರೇ ವಾರೀಸುದಾರರು.

أُولٰٓئِكَ هُمُ الْوٰرِثُوْنَ ۞١٠

11. ವಾರೀಸಿನಲ್ಲಿ 'ಮಹೋನ್ನತ ಸ್ವರ್ಗ' ಪಡೆಯುವರು ಮತ್ತು ಅದರಲ್ಲಿ ಸದಾ ವಾಸಿಸುವರು.

الَّذِيْنَ يَرِثُوْنَ الْفِرْدَوْسَ ؕ هُمْ فِيْهَا خٰلِدُوْنَ ۞١١

12. ನಾವು ಮಾನವನನ್ನು ಮಣ್ಣಿನ ಸತ್ವದಿಂದ ಸೃಷ್ಟಿಸಿದೆವು.

وَلَقَدْ خَلَقْنَا الْاِنْسَانَ مِنْ سُلٰلَةٍ مِّنْ طِيْنٍ ۞١٢

13. ತರುವಾಯ ಅದನ್ನು ಒಂದು ಸುರಕ್ಷಿತ ಸ್ಥಳದಲ್ಲಿ ತೊಟ್ಟಿಕ್ಕಿದ ಹನಿಯಾಗಿ ಮಾರ್ಪಡಿಸಿದೆವು.

ثُمَّ جَعَلْنٰهُ نُطْفَةً فِيْ قَرَارٍ مَّكِيْنٍ ۞١٣

14. ಅನಂತರ ಆ ಹನಿಗೆ ಮಾಂಸಪಿಂಡದ ರೂಪ ಕೊಟ್ಟೆವು. ಬಳಿಕ ಮಾಂಸಪಿಂಡವನ್ನು ಮಾಂಸಖಂಡವನ್ನಾಗಿ ಮಾಡಿದೆವು. ಆಮೇಲೆ ಮಾಂಸಖಂಡವನ್ನು ಎಲುಬುಗಳಾಗಿ ಮಾಡಿದೆವು. ತರುವಾಯ ಎಲುಬುಗಳ ಮೇಲೆ ಮಾಂಸ ತೊಡಿಸಿದೆವು. ಆ ಬಳಿಕ ಅದನ್ನೊಂದು ಬೇರೆಯೇ ಸೃಷ್ಟಿಯನ್ನಾಗಿ ಮಾಡಿ ನಿಲ್ಲಿಸಿದೆವು.[3] ಅಲ್ಲಾಹನು ಮಹಾ ಸಮೃದ್ಧನು; ಸಕಲ ಶಿಲ್ಪಿಗಳಿಗಿಂತ ಶ್ರೇಷ್ಠ ಶಿಲ್ಪಿ.

ثُمَّ خَلَقْنَا النُّطْفَةَ عَلَقَةً فَخَلَقْنَا الْعَلَقَةَ مُضْغَةً فَخَلَقْنَا الْمُضْغَةَ عِظٰمًا فَكَسَوْنَا الْعِظٰمَ لَحْمًا ۗ ثُمَّ اَنْشَاْنٰهُ خَلْقًا اٰخَرَ ؕ فَتَبٰرَكَ اللّٰهُ اَحْسَنُ الْخٰلِقِيْنَ ۞١٤

15. ಅದಾದ ಬಳಿಕ ನಿಮಗೆ ಖಂಡಿತವಾಗಿಯೂ ಸಾಯಲಿಕ್ಕಿದೆ.

ثُمَّ اِنَّكُمْ بَعْدَ ذٰلِكَ لَمَيِّتُوْنَ ۞١٥

16. ಮತ್ತೆ ಪುನರುತ್ಥಾನದ ದಿನ ಖಂಡಿತವಾಗಿಯೂ ನೀವು ಎಬ್ಬಿಸಲ್ಪಡುವಿರಿ.

ثُمَّ اِنَّكُمْ يَوْمَ الْقِيٰمَةِ تُبْعَثُوْنَ ۞١٦

17. ನಾವು ನಿಮ್ಮ ಮೇಲ್ಭಾಗದಲ್ಲಿ ಏಳು ಮಾರ್ಗಗಳನ್ನು ರಚಿಸಿದೆವು.[4] ಸೃಷ್ಟಿಸುವ ಕಾರ್ಯದ ಬಗ್ಗೆ ನಾವೇನೂ ಅಜ್ಞರಾಗಿರಲಿಲ್ಲ.[5]

وَلَقَدْ خَلَقْنَا فَوْقَكُمْ سَبْعَ طَرَآئِقَ ۖ وَمَا كُنَّا عَنِ الْخَلْقِ غٰفِلِيْنَ ۞١٧

3. ಅರ್ಥಾತ್- ಇದೆಲ್ಲವೂ ಪ್ರಾಣಿಗಳ ಸೃಷ್ಟಿಯ ವೇಳೆಯೂ ಸಂಭವಿಸುತ್ತದೆ. ಆದರೆ ಅಲ್ಲಾಹನು ಈ ಸೃಷ್ಟಿಯ ವಿಧಾನದ ಮೂಲಕ ಮಾನವನನ್ನು ಪ್ರಾಣಿಗಳಿಗಿಂತ ಸಂಪೂರ್ಣ ಭಿನ್ನವಾದ ಬೇರೆಯೇ ಸ್ವರೂಪದ ಜೀವಿಯಾಗಿ ಮಾಡಿ ಸೃಷ್ಟಿಸಿದನು.

4. ಪ್ರಾಯಶಃ ಇದರ ಅರ್ಥ ಏಳು ಗ್ರಹಗಳು ಪರಿಭ್ರಮಿಸುವ ಕಕ್ಷೆಯಾಗಿರಬಹುದು. ಆ ಕಾಲದ ಮಾನವ ಏಳು ನಕ್ಷತ್ರಗಳ ಬಗ್ಗೆ ಮಾತ್ರ ತಿಳಿದಿದ್ದನು. ಆದ್ದರಿಂದ ಇಲ್ಲಿ ಏಳು ಕಕ್ಷೆಗಳ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ. ಅದರ ಅರ್ಥ ಇತರ ಕಕ್ಷೆಗಳು ಅಸ್ತಿತ್ವದಲ್ಲೇ ಇಲ್ಲವೆಂದಲ್ಲ.

5. ಇನ್ನೊಂದು ಭಾಷಾಂತರ ಹೀಗಾಗಬಹುದು, "ಸೃಷ್ಟಿಗಳಿಂದ ನಾವು ಅಲಕ್ಷ್ಯರಾಗಿರುವುದಿಲ್ಲ ಅಥವಾ ಅಲಕ್ಷ್ಯರಾಗಿಲ್ಲ" ಮೊದಲನೆಯ ಭಾಷಾಂತರದ ಪ್ರಕಾರ ಈ ಸೂಕ್ತದ ಅರ್ಥವೇನೆಂದರೆ ನಾವು ಸೃಷ್ಟಿಸಿರುವುದೆಲ್ಲವೂ ಯಾವುದಾದರೊಬ್ಬ ಅಜ್ಞಾನಿಯ ಮೂಲಕ ಹಠಾತ್ತನೆ ಸೃಷ್ಟಿಸಲ್ಪಟ್ಟದ್ದಲ್ಲ. ಅದನ್ನು ಪೂರ್ವಯೋಜಿತ ರೀತಿಯಲ್ಲಿ ಸಂಪೂರ್ಣ ಜ್ಞಾನದೊಂದಿಗೆ ಸೃಷ್ಟಿಸಲಾಗಿದೆ. ಅನೇಕ ಪ್ರಮುಖ ನಿಯಮಗಳು ಅದರ ಹಿಂದೆ ಕಾರ್ಯಪ್ರವೃತ್ತವಾಗಿವೆ. ಸಣ್ಣ ವಸ್ತುವಿನಿಂದ ದೊಡ್ಡ ವಸ್ತುಗಳ ತನಕ ಸಮಸ್ತ ನಿಸರ್ಗ ವ್ಯವಸ್ಥೆಯಲ್ಲಿ

18. ಮತ್ತು ನಾವು ಆಕಾಶದಿಂದ ಸರಿಯಾದ ಲೆಕ್ಕ ಪ್ರಕಾರ ನಿರ್ದಿಷ್ಟ ಪ್ರಮಾಣದಲ್ಲಿ ನೀರನ್ನು ಸುರಿಸಿದೆವು ಮತ್ತು ಅದನ್ನು ನೆಲದಲ್ಲಿ ನಿಲ್ಲಿಸಿ ಬಿಟ್ಟೆವು. ನಾವು ಹೇಗೆ ಬೇಕಿದ್ದರೂ ಅದನ್ನು ಅದೃಶ್ಯಗೊಳಿಸಬಲ್ಲೆವು.

وَاَنْزَلْنَا مِنَ السَّمَآءِ مَآءًۢ بِقَدَرٍ فَاَسْكَنّٰهُ فِى الْاَرْضِ ۖ وَاِنَّا عَلٰى ذَهَابٍۢ بِهٖ لَقٰدِرُوْنَ ﴿١٨﴾

19. ತರುವಾಯ ಆ ನೀರಿನ ಮೂಲಕ ನಾವು ನಿಮಗಾಗಿ ಖರ್ಜೂರ ಮತ್ತು ದ್ರಾಕ್ಷಾ ತೋಟಗಳನ್ನು ಉಂಟು ಮಾಡಿದೆವು. ಈ ತೋಟಗಳಲ್ಲಿ ನಿಮಗಾಗಿ ರುಚಿಕರವಾದ ಅನೇಕ ಫಲಗಳಿವೆ ಮತ್ತು ನೀವು ಅವುಗಳಿಂದ ಆಹಾರ ಪಡೆಯುತ್ತೀರಿ-

فَاَنْشَاْنَا لَكُمْ بِهٖ جَنّٰتٍ مِّنْ نَّخِيْلٍ وَّاَعْنَابٍ ۘ لَكُمْ فِيْهَا فَوَاكِهُ كَثِيْرَةٌ وَّمِنْهَا تَاْكُلُوْنَ ﴿١٩﴾ نصف

20. ಮತ್ತು ಸಿನಾಯ್ ಪರ್ವತದಲ್ಲಿ ಬೆಳೆಯುವ ಮರವನ್ನೂ ನಾವು ಸೃಷ್ಟಿಸಿದೆವು.[6] ಅದು ಎಣ್ಣೆಯನ್ನೂ ತಿನ್ನುವವರಿಗಾಗಿ ಪದಾರ್ಥವನ್ನೂ ಹೊತ್ತು ಬೆಳೆಯುತ್ತದೆ.

وَشَجَرَةً تَخْرُجُ مِنْ طُوْرِ سَيْنَآءَ تَنْۢبُتُ بِالدُّهْنِ وَصِبْغٍ لِّلْاٰكِلِيْنَ ﴿٢٠﴾

21. ವಾಸ್ತವದಲ್ಲಿ ಜಾನುವಾರುಗಳಲ್ಲಿಯೂ ನಿಮಗೊಂದು ಪಾಠವಿದೆ. ಅವುಗಳ ಉದರದೊಳಗೆ ಏನಿರುವುದೋ ಅದರಿಂದಲೇ ನಾವು ನಿಮಗೊಂದು ವಸ್ತುವನ್ನು ಕುಡಿಸುತ್ತೇವೆ ಮತ್ತು ನಿಮಗೆ ಅವುಗಳಲ್ಲಿ ಬೇರೆ ಅನೇಕ ಪ್ರಯೋಜನಗಳೂ ಇವೆ. ಅವುಗಳನ್ನು ನೀವು ತಿನ್ನುತ್ತೀರಿ-

وَاِنَّ لَكُمْ فِى الْاَنْعَامِ لَعِبْرَةً ۗ نُسْقِيْكُمْ مِّمَّا فِىْ بُطُوْنِهَا وَلَكُمْ فِيْهَا مَنَافِعُ كَثِيْرَةٌ وَّمِنْهَا تَاْكُلُوْنَ ﴿٢١﴾

22. ಮತ್ತು ಅವುಗಳ ಮೇಲೂ ನಾವೆಗಳ ಮೇಲೂ ನೀವು ಸವಾರಿ ಮಾಡುತ್ತೀರಿ.

وَعَلَيْهَا وَعَلَى الْفُلْكِ تُحْمَلُوْنَ ﴿٢٢﴾ ع

23. ನಾವು ನೂಹರನ್ನು ಅವರ ಜನಾಂಗದ ಕಡೆಗೆ ರವಾನಿಸಿದೆವು. ಅವರು ಹೀಗೆಂದರು- "ನನ್ನ ಜನಾಂಗದವರೇ ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ ಅವನ ಹೊರತು ನಿಮಗೆ ಇನ್ನಾವ ಆರಾಧ್ಯನೂ ಇಲ್ಲ. ನೀವು ಭಯಪಡುವುದಿಲ್ಲವೇ!"

وَلَقَدْ اَرْسَلْنَا نُوْحًا اِلٰى قَوْمِهٖ فَقَالَ يٰقَوْمِ اعْبُدُوا اللّٰهَ مَا لَكُمْ مِّنْ اِلٰهٍ غَيْرُهٗ ؕ اَفَلَا تَتَّقُوْنَ ﴿٢٣﴾

ಸರ್ವಾಂಗೀಣ ಸಮತೋಲನವಿದೆ. ಈ ಮಹಾನ್ ಕಾರ್ಯಾಗಾರದಲ್ಲಿ ಎಲ್ಲೆಡೆ ಒಂದು ಉದ್ದೇಶ ಗೋಚರಿಸುತ್ತದೆ. ಅದು ಸೃಷ್ಟಿಕರ್ತನ ಜಾಣ್ಮೆಗೆ ಸಾಕ್ಷ್ಯ ವಹಿಸುತ್ತದೆ. ಎರಡನೆಯ ಭಾಷಾಂತರದ ಆಧಾರದಲ್ಲಿ ಪ್ರಸ್ತುತ ಸೂಕ್ತದ ಅರ್ಥವೇನೆಂದರೆ ಈ ನಿಸರ್ಗದಲ್ಲಿ ನಾವು ಸೃಷ್ಟಿಸಿರುವ ಯಾವುದೇ ಸೃಷ್ಟಿಯ ಅವಶ್ಯಕತೆಗಳ ಬಗ್ಗೆ ನಾವು ಅಲಕ್ಷ್ಯರಾಗಿಲ್ಲ. ಯಾವುದೇ ಪರಿಸ್ಥಿತಿಯ ಬಗ್ಗೆ ನಾವೆಂದೂ ಅಲಕ್ಷ್ಯರಾಗಿರಲಿಲ್ಲ. ನಮ್ಮ ಯೋಜನೆಗೆ ವಿರುದ್ಧವಾಗಿ ವರ್ತಿಸಲು ನಾವು ಯಾರಿಗೂ ಅವಕಾಶ ಕೊಟ್ಟಿಲ್ಲ. ಯಾವುದೇ ವಸ್ತುವಿನ ನೈಸರ್ಗಿಕ ಬೇಡಿಕೆಗಳನ್ನು ಈಡೇರಿಸುವಲ್ಲಿ ನಾವು ಯಾವುದೇ ರೀತಿಯ ಚ್ಯುತಿ ಮಾಡಿಲ್ಲ. ಒಂದೊಂದು ಕಣ ಮತ್ತು ಎಲೆಯ ಸ್ಥಿತಿಯನ್ನೂ ನಾವು ಬಲ್ಲವರಾಗಿದ್ದೇವೆ.

6. ಅರ್ಥಾತ್- ಜೀತವೃಕ್ಷ(Olive) ಭೂಮಧ್ಯ ಸಮುದ್ರದ ಸುತ್ತಮುತ್ತಲಿನ ಪ್ರದೇಶದ ಬೆಳೆಗಳಲ್ಲಿ ಅದು ಅತ್ಯಂತ ಪ್ರಮುಖವಾದುದು. ಸೀನಾಯ್ ಪರ್ವತವನ್ನು ಪ್ರಮುಖ ಪ್ರದೇಶವಾಗಿ ಹೊಂದಿರುವ ಭೂಭಾಗವೇ ಈ ವೃಕ್ಷದ ಮೂಲ ಸ್ಥಾನವಾಗಿರುವುದರಿಂದ ಪ್ರಾಯಶಃ ಇದನ್ನು ಸೀನಾಯ್ ಪರ್ವತದ ಜತೆಗೆ ಪ್ರಸ್ತಾಪಿಸಲಾಗಿರಬಹುದು.

24. ಸತ್ಯವನ್ನು ನಿಷೇಧಿಸಿದ ಅವರ ಜನಾಂಗದ ಸರದಾರರು (ಹೀಗೆ) ಹೇಳತೊಡಗಿದರು - "ಇವನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯನಲ್ಲದೆ ಇನ್ನೇನೂ ಅಲ್ಲ. ನಿಮ್ಮ ಮೇಲೆ ಹಿರಿಮೆಯನ್ನು ಗಳಿಸುವುದೇ ಇವನ ಉದ್ದೇಶ, ಅಲ್ಲಾಹನು ಕಳುಹಿಸಲಿಚ್ಛಿಸಿದರೆ ದೇವಚರರನ್ನು ಕಳುಹಿಸುತ್ತಿದ್ದನು. (ಮಾನವರು ಸಂದೇಶವಾಹಕ ರಾಗಿ ಬಂದರೆಂಬ) ಇಂತಹ ವಿಷಯವನ್ನು ನಾವು ನಮ್ಮ ಪೂರ್ವಿಕರ ಕಾಲದಲ್ಲೆಂದೂ ಕೇಳಿಯೇ ಇರಲಿಲ್ಲ.

فَقَالَ الْمَلَؤُا الَّذِيْنَ كَفَرُوْا مِنْ قَوْمِهٖ
مَا هٰذَآ اِلَّا بَشَرٌ مِّثْلُكُمْۙ يُرِيْدُ اَنْ
يَّتَفَضَّلَ عَلَيْكُمْؕ وَلَوْ شَآءَ اللّٰهُ لَاَنْزَلَ
مَلٰٓئِكَةًۖۚ مَّا سَمِعْنَا بِهٰذَا فِيْٓ اٰبَآئِنَا
الْاَوَّلِيْنَ ۝٢٤

25. ಏನೂ ಇಲ್ಲ, ಇವನಿಗೆ ಸ್ವಲ್ಪ ಹುಚ್ಚು ಹಿಡಿದಿದೆ. ಸ್ವಲ್ಪ ಕಾಲ ಕಾದು ನೋಡಿರಿ. (ಗುಣವಾಗಲೂ ಬಹುದು)."

اِنْ هُوَ اِلَّا رَجُلٌۢ بِهٖ جِنَّةٌ فَتَرَبَّصُوْا
بِهٖ حَتّٰى حِيْنٍ ۝٢٥

26. ನೂಹ್ ಹೇಳಿದರು - "ನನ್ನ ಪ್ರಭೂ, ಇವರು ನನ್ನನ್ನು ಸುಳ್ಳಾಗಿಸಿ ರುವುದರಿಂದ ಇನ್ನು ನೀನೇ ನನಗೆ ಸಹಾಯ ಮಾಡು."

قَالَ رَبِّ انْصُرْنِيْ بِمَا كَذَّبُوْنِ ۝٢٦

27. ನಾವು ಅವರ ಮೇಲೆ (ಈ ರೀತಿ) 'ದಿವ್ಯಬೋಧನೆ' ಮಾಡಿದೆವು- ನಮ್ಮ ಮೇಲ್ನೋಟದಲ್ಲಿ ಮತ್ತು ನಮ್ಮ 'ದಿವ್ಯಬೋಧನೆ' ಪ್ರಕಾರ ನಾವೆಯನ್ನು ತಯಾರಿಸಿರಿ. ಅನಂತರ ನಮ್ಮ ಆಜ್ಞೆ ಬಂದಾಗ ಹಾಗೂ ಭಟ್ಟಿಯು ಉಕ್ಕೇರಿದಾಗ ಪ್ರತಿಯೊಂದು ವಿಧದ ಪ್ರಾಣಿಗಳಿಂದ ಒಂದೊಂದು ಜೊತೆ ತೆಗೆದುಕೊಂಡು ಅದರಲ್ಲಿ ಹತ್ತಿಕೊಳ್ಳಿರಿ. ಯಾರ ವಿರುದ್ಧ ಮೊದಲೇ ತೀರ್ಮಾನ ವಾಗಿ ಬಿಟ್ಟಿದೆಯೋ ಅವರನ್ನು ಬಿಟ್ಟು ನಿಮ್ಮ ಬಂಧುಗಳನ್ನೂ ಜೊತೆಗೆ ಕರೆದುಕೊಳ್ಳಿರಿ ಮತ್ತು ಅಕ್ರಮಿಗಳ ವಿಷಯದಲ್ಲಿ ನನ್ನೊಡನೆ ಏನೂ ಹೇಳಬಾರದು ಇವರಿನ್ನು ಮುಳುಗಲಿದ್ದಾರೆ.

فَاَوْحَيْنَآ اِلَيْهِ اَنِ اصْنَعِ الْفُلْكَ
بِاَعْيُنِنَا وَوَحْيِنَا فَاِذَا جَآءَ اَمْرُنَا
وَفَارَ التَّنُّوْرُۙ فَاسْلُكْ فِيْهَا مِنْ
كُلٍّ زَوْجَيْنِ اثْنَيْنِ وَاَهْلَكَ اِلَّا مَنْ
سَبَقَ عَلَيْهِ الْقَوْلُ مِنْهُمْۚ وَلَا تُخَاطِبْنِيْ
فِي الَّذِيْنَ ظَلَمُوْاۚ اِنَّهُمْ مُّغْرَقُوْنَ ۝٢٧

28. ಅನಂತರ ನೀವು ನಿಮ್ಮ ಜೊತೆಗಾರರ ಸಹಿತ ನಾವೆಯ ಮೇಲೆ ಏರಿದಾಗ, "ಅಕ್ರಮಿಗಳಿಂದ ನಮ್ಮನ್ನು ಪಾರುಗೊಳಿಸಿದ ಅಲ್ಲಾಹ ನಿಗೆ ಕೃತಜ್ಞತೆಗಳು" ಎಂದು ಹೇಳಿರಿ.

فَاِذَا اسْتَوَيْتَ اَنْتَ وَمَنْ مَّعَكَ عَلَى
الْفُلْكِ فَقُلِ الْحَمْدُ لِلّٰهِ الَّذِيْ نَجّٰنَا
مِنَ الْقَوْمِ الظّٰلِمِيْنَ ۝٢٨

29. ಮತ್ತು "ನನ್ನ ಪ್ರಭೂ, ನನ್ನನ್ನು ಸಮೃದ್ಧಿಯಿಂದ ಕೂಡಿದ ಸ್ಥಳದಲ್ಲಿ ಇಳಿಸು, ನೀನು ಅತ್ಯುತ್ತಮ ಸ್ಥಾನವೊದಗಿಸುವವನಾಗಿ ರುವೆ" ಎಂದೂ ಹೇಳಿರಿ.

وَقُلْ رَّبِّ اَنْزِلْنِيْ مُنْزَلًا مُّبٰرَكًا
وَّاَنْتَ خَيْرُ الْمُنْزِلِيْنَ ۝٢٩

30. ಈ ಕಥೆಯಲ್ಲಿ ದೊಡ್ಡ ನಿದರ್ಶನಗಳಿವೆ ಮತ್ತು ಸತ್ವಪರೀಕ್ಷೆ ಯನ್ನಂತೂ ನಾವು ಮಾಡಿಯೇ ತೀರುತ್ತೇವೆ.

اِنَّ فِيْ ذٰلِكَ لَاٰيٰتٍ وَّاِنْ كُنَّا لَمُبْتَلِيْنَ ۝٣٠

31. ಅವರ ತರುವಾಯ ನಾವು ಇನ್ನೊಂದು ಯುಗದ ಜನಾಂಗವನ್ನು ಎಬ್ಬಿಸಿದೆವು.

ثُمَّ أَنشَأْنَا مِنۢ بَعْدِهِمْ قَرْنًا ءَاخَرِينَ ﴿٣١﴾

32. ಆ ಬಳಿಕ ಅವರಲ್ಲಿಗೆ ಅವರ ಜನಾಂಗದವರೇ ಆದ ಒಬ್ಬ ಸಂದೇಶವಾಹಕರನ್ನು ಕಳುಹಿಸಿದೆವು. (ಅವರು) ಅಲ್ಲಾಹನ ದಾಸ್ಯ-ಆರಾಧನೆ ಮಾಡಿರಿ. ನಿಮಗೆ ಅವನ ಹೊರತು ಇನ್ನಾವ ಆರಾಧ್ಯನೂ ಇಲ್ಲ. ನೀವೇನು ಭಯ ಪಡುವುದಿಲ್ಲವೇ? (ಎಂದು ಅವರಿಗೆ ಕರೆ ನೀಡಿದರು)

فَأَرْسَلْنَا فِيهِمْ رَسُولًا مِّنْهُمْ أَنِ
اعْبُدُوا اللَّهَ مَا لَكُم مِّنْ إِلَٰهٍ غَيْرُهُۥٓ ۖ
أَفَلَا تَتَّقُونَ ﴿٣٢﴾

33. ಸತ್ಯವನ್ನು ನಿಷೇಧಿಸಿದವರೂ ಪರಲೋಕದ ಸಂದರ್ಶನವನ್ನು ಸುಳ್ಳಾಗಿಸಿದವರೂ ಲೌಕಿಕ ಜೀವನದಲ್ಲಿ ನಾವು ಸಂಪನ್ನಗೊಳಿಸಿದ್ದವರೂ ಆದ ಆ ಜನಾಂಗದ ಸರದಾರರು (ಹೀಗೆ) ಹೇಳತೊಡಗಿದರು- ಈತನು ನಿಮ್ಮಂತೆಯೇ ಇರುವ ಒಬ್ಬ ಮಾನವನಲ್ಲದೆ ಬೇರೇನೂ ಅಲ್ಲ. ನೀವು ತಿನ್ನುವುದನ್ನೇ ಇವನೂ ತಿನ್ನುತ್ತಾನೆ; ನೀವು ಕುಡಿಯುವುದನ್ನೇ ಇವನೂ ಕುಡಿಯುತ್ತಾನೆ.

وَقَالَ الْمَلَأُ مِن قَوْمِهِ الَّذِينَ كَفَرُوا
وَكَذَّبُوا بِلِقَآءِ الْءَاخِرَةِ وَأَتْرَفْنَٰهُمْ فِى
الْحَيَوٰةِ الدُّنْيَا مَا هَٰذَآ إِلَّا بَشَرٌ مِّثْلُكُمْ
يَأْكُلُ مِمَّا تَأْكُلُونَ مِنْهُ وَيَشْرَبُ
مِمَّا تَشْرَبُونَ ﴿٣٣﴾

34. ಈಗ ನೀವು ನಿಮ್ಮಂತೆಯೇ ಇರುವ ಒಬ್ಬ ಮಾನವನ ಆಜ್ಞಾನುಸರಣೆಯನ್ನು ಸ್ವೀಕರಿಸಿದರೆ ಖಂಡಿತವಾಗಿಯೂ ನೀವು ನಷ್ಟದಲ್ಲೇ ಇರುವಿರಿ.

وَلَئِنْ أَطَعْتُم بَشَرًا مِّثْلَكُمْ إِنَّكُمْ
إِذًا لَّخَٰسِرُونَ ﴿٣٤﴾

35. ನೀವು ಸತ್ತು ಮಣ್ಣಾಗಿ ಹೋದ ಬಳಿಕ ಮತ್ತು ಅಸ್ಥಿಪಂಜರವಾಗಿ ಬಿಟ್ಟ ಬಳಿಕ ನೀವು (ಸಮಾಧಿಗಳಿಂದ) ಹೊರ ತೆಗೆಯಲ್ಪಡುವಿರೆಂದು ಇವನು ನಿಮಗೆ ತಿಳಿಸುತ್ತಿದ್ದಾನೆಯೇ?

أَيَعِدُكُمْ أَنَّكُمْ إِذَا مِتُّمْ وَكُنتُمْ
تُرَابًا وَعِظَٰمًا أَنَّكُم مُّخْرَجُونَ ﴿٣٥﴾

36. ಅಸಾಧ್ಯ, ನಿಮಗೆ ನೀಡಲಾಗುತ್ತಿರುವ ಈ ವಾಗ್ದಾನ ತೀರಾ ಅಸಾಧ್ಯವಾದುದು.

هَيْهَاتَ هَيْهَاتَ لِمَا تُوعَدُونَ ﴿٣٦﴾

37. ಜೀವನವೆಂದರೆ ಕೇವಲ ಈ ಲೋಕದ ಜೀವನವಲ್ಲದೆ ಮತ್ತೇನೂ ಇಲ್ಲ. ಇಲ್ಲೇ ನಾವು ಸಾಯಬೇಕಾಗಿದೆ, ಇಲ್ಲೇ ಬದುಕಬೇಕಾಗಿದೆ. ಖಂಡಿತವಾಗಿಯೂ ನಾವು ಎಬ್ಬಿಸಲ್ಪಡುವವರಲ್ಲ.

إِنْ هِىَ إِلَّا حَيَاتُنَا الدُّنْيَا نَمُوتُ وَنَحْيَا
وَمَا نَحْنُ بِمَبْعُوثِينَ ﴿٣٧﴾

38. ಈತ ಅಲ್ಲಾಹನ ಹೆಸರಲ್ಲಿ ಬರಿಯ ಸುಳ್ಳು ಸೃಷ್ಟಿಸುತ್ತಿದ್ದಾನೆ. ನಾವೆಂದಿಗೂ ಇವನನ್ನು ನಂಬುವವರಲ್ಲ.

إِنْ هُوَ إِلَّا رَجُلٌ افْتَرَىٰ عَلَى اللَّهِ
كَذِبًا وَمَا نَحْنُ لَهُۥ بِمُؤْمِنِينَ ﴿٣٨﴾

39. ಸಂದೇಶವಾಹಕರು ಹೇಳಿದರು, "ನನ್ನ ಪ್ರಭೂ, ಇವರು ನನ್ನನ್ನು ಸುಳ್ಳಾಗಿಸಿರುವುದರಿಂದ ಈಗ ನೀನೇ ನನಗೆ ಸಹಾಯ ಮಾಡು."

قَالَ رَبِّ انصُرْنِى بِمَا كَذَّبُونِ ﴿٣٩﴾

40. ಉತ್ತರ ಬಂತು: "ಇವರು ತಮ್ಮ ಕರ್ಮಗಳಿಗಾಗಿ ಪಶ್ಚಾತ್ತಾಪ ಪಡುವ ಸಮಯ ಸಮೀಪಿಸಿದೆ."

قَالَ عَمَّا قَلِيلٍ لَّيُصْبِحُنَّ نٰدِمِينَ ۝٤٠

41. ಕೊನೆಗೆ ಸಂಪೂರ್ಣ ನ್ಯಾಯದೊಂದಿಗೆ ಒಂದು ಮಹಾ ಕೋಲಾಹಲವು ಅವರನ್ನು ಬಿಗಿಹಿಡಿದು ಬಿಟ್ಟಿತು ಮತ್ತು ನಾವು ಅವರನ್ನು ಕಸವನ್ನಾಗಿ ಮಾಡಿ ಒಗೆದು ಬಿಟ್ಟೆವು. ಅಕ್ರಮಿ ಜನಾಂಗ ತೊಲಗಲಿ!

فَأَخَذَتْهُمُ الصَّيْحَةُ بِالْحَقِّ فَجَعَلْنٰهُمْ غُثَآءً ۚ فَبُعْدًا لِّلْقَوْمِ الظّٰلِمِينَ ۝٤١

42. ತರುವಾಯ ನಾವು ಅವರ ಬಳಿಕ ಇತರ ಜನಾಂಗಗಳನ್ನು ಎಬ್ಬಿಸಿದೆವು.

ثُمَّ أَنْشَأْنَا مِنْ بَعْدِهِمْ قُرُونًا اٰخَرِينَ ۝٤٢

43. ಯಾವ ಜನಾಂಗವೂ ತನ್ನ ಅವಧಿಗಿಂತ ಮುಂಚೆ ಕೊನೆಗೊಳ್ಳಲೂ ಇಲ್ಲ, ಆ ಬಳಿಕ ಉಳಿಯಲೂ ಇಲ್ಲ.

مَا تَسْبِقُ مِنْ أُمَّةٍ أَجَلَهَا وَمَا يَسْتَأْخِرُونَ ۝٤٣

44. ತರುವಾಯ ನಾವು ನಿರಂತರವಾಗಿ ನಮ್ಮ ಸಂದೇಶವಾಹಕರನ್ನು ಕಳುಹಿಸಿದೆವು. ಯಾವೆಲ್ಲ ಜನಾಂಗಗಳ ಬಳಿಗೆ ಅದರ ಸಂದೇಶವಾಹಕರು ಬಂದರೋ ಆ ಎಲ್ಲಾ ಜನಾಂಗಗಳು ತಮ್ಮ ಸಂದೇಶವಾಹಕರನ್ನು ಸುಳ್ಳಾಗಿಸಿ ಬಿಟ್ಟವು ಮತ್ತು ನಾವು ಒಂದರ ಹಿಂದೆ ಇನ್ನೊಂದರಂತೆ ಆ ಜನಾಂಗಗಳನ್ನು ನಾಶ ಮಾಡುತ್ತಾ ಹೋದೆವು. ಹೀಗೆ ಅವರನ್ನು ನಾವು ಕೇವಲ ಕಥೆಯಾಗಿ ಮಾಡಿಬಿಟ್ಟೆವು. ಶಾಪವಿರಲಿ, ವಿಶ್ವಾಸವಿರಿಸದ ಜನಾಂಗಗಳಿಗೆ.

ثُمَّ أَرْسَلْنَا رُسُلَنَا تَتْرَا ۖ كُلَّمَا جَآءَ أُمَّةً رَّسُولُهَا كَذَّبُوهُ فَأَتْبَعْنَا بَعْضَهُمْ بَعْضًا وَّجَعَلْنٰهُمْ أَحَادِيثَ ۚ فَبُعْدًا لِّقَوْمٍ لَّا يُؤْمِنُونَ ۝٤٤

45. ಅನಂತರ ನಾವು ಮೂಸಾ ಮತ್ತು ಅವರ ಸಹೋದರ ಹಾರೂನರನ್ನು ನಮ್ಮ ನಿದರ್ಶನಗಳೊಂದಿಗೆ ಹಾಗೂ ಸುವ್ಯಕ್ತ ಪ್ರಮಾಣ ಸಹಿತ ಫಿರ್‌ಔನನ ಹಾಗೂ ಅವನ ಆಸ್ಥಾನಿಕರ ಕಡೆಗೆ ಕಳುಹಿಸಿದೆವು.

ثُمَّ أَرْسَلْنَا مُوسٰى وَأَخَاهُ هٰرُونَ ۙ بِاٰيٰتِنَا وَسُلْطٰنٍ مُّبِينٍ ۝٤٥

46. ಆದರೆ ಅವರು ಅಹಂಕಾರ ತೋರಿದರು. ಅವರೊಂದು ಉದ್ಧಟ ಜನಾಂಗವಾಗಿದ್ದರು.

إِلٰى فِرْعَوْنَ وَمَلَإِيْهِ فَاسْتَكْبَرُوا وَكَانُوا قَوْمًا عَالِينَ ۝٤٦

47. ಅವರು ಹೀಗೆಂದರು- "ನಾವು ನಮ್ಮಂತೆಯೇ ಇರುವ ಇಬ್ಬರ ಮೇಲೆ ವಿಶ್ವಾಸವಿರಿಸಬೇಕೇ? ಅದರಲ್ಲೂ, ಅವರು ನಮ್ಮ ದಾಸ್ಯದಲ್ಲಿರುವ ಜನಾಂಗದವರು."

فَقَالُوا أَنُؤْمِنُ لِبَشَرَيْنِ مِثْلِنَا وَقَوْمُهُمَا لَنَا عٰبِدُونَ ۝٤٧

48. ಆ ಪ್ರಕಾರ ಅವರು ಇಬ್ಬರನ್ನೂ ಸುಳ್ಳಾಗಿಸಿಬಿಟ್ಟರು ಮತ್ತು ನಾಶ ಹೊಂದುವವರಲ್ಲಿ ಸೇರಿ ಹೋದರು.

فَكَذَّبُوهُمَا فَكَانُوا مِنَ الْمُهْلَكِينَ ۝٤٨

49. ಜನರು ಸನ್ಮಾರ್ಗದರ್ಶನ ಪಡೆಯಲೆಂದು ಮೂಸಾರಿಗೆ ನಾವು ಗ್ರಂಥವನ್ನು ದಯಪಾಲಿಸಿದೆವು.

وَلَقَدْ آتَيْنَا مُوسَى الْكِتَابَ
لَعَلَّهُمْ يَهْتَدُونَ ﴿٤٩﴾

50. ಮರ್ಯಮರ ಪುತ್ರ (ಈಸಾ) ಮತ್ತು ಅವರ ಮಾತೆಯನ್ನು ನಾವು ಒಂದು ನಿದರ್ಶನವನ್ನಾಗಿ ಮಾಡಿದೆವು ಮತ್ತು ಅವರನ್ನು ಒಂದು ಉನ್ನತ ಪೀಠಭೂಮಿಯಲ್ಲಿರಿಸಿದೆವು. ಅದು ನೆಮ್ಮದಿಯ ಸ್ಥಾನವಾಗಿತ್ತು. ಅದರಲ್ಲಿ ಚಿಲುಮೆಗಳು ಹರಿಯುತ್ತಿದ್ದುವು.

وَجَعَلْنَا ابْنَ مَرْيَمَ وَأُمَّهُ آيَةً
وَآوَيْنَاهُمَا إِلَىٰ رَبْوَةٍ ذَاتِ قَرَارٍ
وَمَعِينٍ ﴿٥٠﴾

51. ಸಂದೇಶವಾಹಕರುಗಳೇ! ಶುದ್ಧ ವಸ್ತುಗಳನ್ನು ಉಣ್ಣಿರಿ ಮತ್ತು ಸತ್ಕರ್ಮಗಳನ್ನು ಮಾಡಿರಿ. ನಿಶ್ಚಯವಾಗಿಯೂ ನೀವು ಮಾಡುವುದೆಲ್ಲವನ್ನೂ ನಾನು ಚೆನ್ನಾಗಿ ಅರಿಯುತ್ತೇನೆ.

يَا أَيُّهَا الرُّسُلُ كُلُوا مِنَ الطَّيِّبَاتِ
وَاعْمَلُوا صَالِحًا ۖ إِنِّي بِمَا تَعْمَلُونَ عَلِيمٌ ﴿٥١﴾

52. ಮತ್ತು ನಿಶ್ಚಯವಾಗಿಯೂ ನಿಮ್ಮ ಈ ಸಮುದಾಯವು ಒಂದೇ ಸಮುದಾಯವಾಗಿದೆ ಮತ್ತು ನಾನು ನಿಮ್ಮ ಪ್ರಭುವಾಗಿರುತ್ತೇನೆ. ಆದುದರಿಂದ ನನ್ನನ್ನೇ ಭಯಪಡಿರಿ.

وَإِنَّ هَٰذِهِ أُمَّتُكُمْ أُمَّةً وَاحِدَةً وَأَنَا
رَبُّكُمْ فَاتَّقُونِ ﴿٥٢﴾

53. ಆದರೆ ಆ ಬಳಿಕ ಜನರು ತಮ್ಮ ಧರ್ಮವನ್ನು ಪರಸ್ಪರ ತುಂಡು ತುಂಡು ಮಾಡಿಬಿಟ್ಟರು. ಪ್ರತಿಯೊಂದು ವರ್ಗವೂ ತನ್ನ ಬಳಿ ಇರುವುದರಲ್ಲೇ ಮಗ್ನವಾಗಿದೆ.

فَتَقَطَّعُوا أَمْرَهُمْ بَيْنَهُمْ زُبُرًا ۖ كُلُّ
حِزْبٍ بِمَا لَدَيْهِمْ فَرِحُونَ ﴿٥٣﴾

54. ಸರಿ, ಹಾಗಾದರೆ ಅವರನ್ನು ಬಿಟ್ಟುಬಿಡಿರಿ. ಒಂದು ನಿಶ್ಚಿತ ಅವಧಿಯ ವರೆಗೆ ತಮ್ಮ ಅನಾಸ್ಥೆಯಲ್ಲಿ ಬಿದ್ದಿರಲಿ.

فَذَرْهُمْ فِي غَمْرَتِهِمْ حَتَّىٰ حِينٍ ﴿٥٤﴾

55-56. ನಾವು ಇವರಿಗೆ ಸಂತಾನ-ಸಂಪತ್ತುಗಳ ಮೂಲಕ ಸಹಾಯ ಮಾಡುತ್ತಿರುವುದನ್ನು, ಇವರು ತಮಗೆ ಒಳಿತುಗಳನ್ನು ಕೊಡುವುದರಲ್ಲೇ ನಾವು ನಿರತರಾಗಿದ್ದೇವೆಂದು ತಿಳಿಯುತ್ತಿದ್ದಾರೆಯೇ? ಇಲ್ಲ. ಅವರಿಗೆ ಇದರ ವಾಸ್ತವಿಕತೆಯ ಪ್ರಜ್ಞೆ ಇಲ್ಲ.

أَيَحْسَبُونَ أَنَّمَا نُمِدُّهُمْ بِهِ مِنْ
مَالٍ وَبَنِينَ ﴿٥٥﴾
نُسَارِعُ لَهُمْ فِي الْخَيْرَاتِ ۚ بَلْ لَا يَشْعُرُونَ ﴿٥٦﴾

57. ವಾಸ್ತವದಲ್ಲಿ ತಮ್ಮ ಪ್ರಭುವಿನ ಭಯದಿಂದ ಭೀತರಾಗಿರುವವರು,

إِنَّ الَّذِينَ هُمْ مِنْ خَشْيَةِ رَبِّهِمْ
مُشْفِقُونَ ﴿٥٧﴾

58. ತಮ್ಮ ಪ್ರಭುವಿನ ನಿದರ್ಶನಗಳ ಮೇಲೆ ವಿಶ್ವಾಸವಿರಿಸುವವರು,

وَالَّذِينَ هُمْ بِآيَاتِ رَبِّهِمْ يُؤْمِنُونَ ﴿٥٨﴾

59. ತಮ್ಮ ಪ್ರಭುವಿನೊಂದಿಗೆ ಯಾರನ್ನೂ ಭಾಗೀದಾರರಾಗಿ ಮಾಡದವರು-

وَالَّذِينَ هُمْ بِرَبِّهِمْ لَا يُشْرِكُونَ ﴿٥٩﴾

60. ಮತ್ತು ಕೊಡುವುದನ್ನು ಕೊಟ್ಟು ತಮ್ಮ ಪ್ರಭುವಿನ ಕಡೆಗೆ

وَالَّذِينَ يُؤْتُونَ مَا آتَوْا وَقُلُوبُهُمْ

ಮರಳಲಿಕ್ಕಿದೆಯೆಂಬ ಪ್ರಜ್ಞೆಯಿಂದ ಕಂಪಿಸುತ್ತಿರುವ ಹೃದಯ ಗಳಿರುವವರು.

وَجِلَةٌ اَنَّهُمْ اِلٰى رَبِّهِمْ رٰجِعُوْنَ ﴿٦٠﴾

61. ಅವರೇ ಒಳಿತುಗಳ ಕಡೆಗೆ ಧಾವಿಸುವವರು ಮತ್ತು ಸ್ಪರ್ಧಿಸಿ ಅವುಗಳನ್ನು ಪಡೆದುಕೊಳ್ಳುವವರು.

اُولٰٓئِكَ يُسٰرِعُوْنَ فِى الْخَيْرٰتِ وَهُمْ
لَهَا سٰبِقُوْنَ ﴿٦١﴾

62. ನಾವು ಯಾವ ವ್ಯಕ್ತಿಗೂ ಅವನ ಶಕ್ತಿಗೆ ಮೀರಿದ ಕಷ್ಟ ಕೊಡುವುದಿಲ್ಲ. ನಮ್ಮ ಬಳಿಯಲ್ಲೊಂದು ಗ್ರಂಥವಿದೆ. ಅದು (ಪ್ರತಿಯೊಬ್ಬನ ವಿಷಯವನ್ನು) ನಿಖರವಾಗಿ ತಿಳಿಸಿ ಬಿಡುವಂತಹದ್ದಾಗಿದೆ.[7] ಹೇಗಿದ್ದರೂ ಜನರ ಮೇಲೆ ಅಕ್ರಮವೆಸಗಲಾಗದು.

وَلَا نُكَلِّفُ نَفْسًا اِلَّا وُسْعَهَا وَ
لَدَيْنَا كِتٰبٌ يَّنْطِقُ بِالْحَقِّ وَهُمْ
لَا يُظْلَمُوْنَ ﴿٦٢﴾

63. ಆದರೆ ಇವರು ಈ ವಿಷಯದ ಬಗ್ಗೆ ಅಜ್ಞರಾಗಿದ್ದಾರೆ ಮತ್ತು ಇವರ ಕರ್ಮಗಳು (ಮೇಲೆ ಹೇಳಲಾಗಿರುವ) ಆ ಕ್ರಮದಿಂದ ಭಿನ್ನವಾಗಿವೆ.

بَلْ قُلُوْبُهُمْ فِىْ غَمْرَةٍ مِّنْ هٰذَا
وَلَهُمْ اَعْمَالٌ مِّنْ دُوْنِ ذٰلِكَ هُمْ
لَهَا عٰمِلُوْنَ ﴿٦٣﴾

64. ನಾವು ಅವರ ವಿಲಾಸಪ್ರಿಯರನ್ನು ಯಾತನೆಯಲ್ಲಿ ಹಿಡಿದು ಬಿಟ್ಟರೆ ಅವರು ರೋದಿಸುವ ವರೆಗೂ (ತಮ್ಮ ಈ ಕೃತ್ಯವನ್ನು) ಮಾಡುತ್ತಲೇ ಸಾಗುವರು.

حَتّٰٓى اِذَآ اَخَذْنَا مُتْرَفِيْهِمْ بِالْعَذَابِ
اِذَا هُمْ يَجْــَٔرُوْنَ ﴿٦٤﴾

65. ಈಗ ನಿಲ್ಲಿಸಿರಿ ನಿಮ್ಮ ಗೋಳಾಟವನ್ನು- ನಮ್ಮ ಕಡೆಯಿಂದ ನಿಮಗಿನ್ನು ಯಾವ ಸಹಾಯವೂ ಸಿಗಲಾರದು.

لَا تَجْــَٔرُوا الْيَوْمَ اِنَّكُمْ مِّنَّا
لَا تُنْصَرُوْنَ ﴿٦٥﴾

66. ನನ್ನ ವಚನಗಳನ್ನು ನಿಮಗೆ ಓದಿ ಹೇಳುತ್ತಿದ್ದಾಗ ನೀವು (ಸಂದೇಶವಾಹಕರ ಸ್ವರ ಕೇಳಿದೊಡನೆ) ಹಿಂದಿರುಗಿ ಓಡುತ್ತಿದ್ದಿರಿ.

قَدْ كَانَتْ اٰيٰتِىْ تُتْلٰى عَلَيْكُمْ
فَكُنْتُمْ عَلٰٓى اَعْقَابِكُمْ تَنْكِصُوْنَ ﴿٦٦﴾

67. ನಿಮ್ಮ ಅಹಂಕಾರದಿಂದಾಗಿ ಅವರನ್ನು ಕಡೆಗಣಿಸುತ್ತಿದ್ದಿರಿ. ನಿಮ್ಮ ಪಡಸಾಲೆಗಳಲ್ಲಿ ಅವರ ಬಗ್ಗೆ ಅಸಂಬದ್ಧ ಮಾತುಗಳನ್ನಾಡುತ್ತಿದ್ದಿರಿ.

مُسْتَكْبِرِيْنَ بِهٖ سٰمِرًا تَهْجُرُوْنَ ﴿٦٧﴾

68. ಇವರೆಂದೂ ಈ ವಚನದ ಬಗ್ಗೆ ವಿವೇಚಿಸಲಿಲ್ಲವೇ? ಅಥವಾ ಇವರ ಪೂರ್ವಜರ ಬಳಿಗೆ ಎಂದೂ ಬಂದಿರದಂತಹ ವಿಷಯ ವನ್ನೇನಾದರೂ ಅವರು ತಂದಿರುವರೇ?

اَفَلَمْ يَدَّبَّرُوا الْقَوْلَ اَمْ جَآءَهُمْ مَّا
لَمْ يَاْتِ اٰبَآءَهُمُ الْاَوَّلِيْنَ ﴿٦٨﴾

69. ಅಥವಾ ಇವರಿಗೆ ತಮ್ಮ ಸಂದೇಶವಾಹಕರ ಪರಿಚಯ

اَمْ لَمْ يَعْرِفُوْا رَسُوْلَهُمْ فَهُمْ لَهٗ

7. ಅರ್ಥಾತ್- ಪ್ರತಿಯೊಬ್ಬ ವ್ಯಕ್ತಿಯ ಕರ್ಮಪತ್ರ. ಅದರಲ್ಲಿ ಅವನ ಪ್ರತಿಯೊಂದು ಕರ್ಮವೂ ದಾಖಲಿಸಲ್ಪಟ್ಟಿದೆ.

مُنْكِرُوْنَ ﴿۶۹﴾

ಇರಲಿಲ್ಲವೇ? (ಅಪರಿಚಿತ ವ್ಯಕ್ತಿಯಾದ ಕಾರಣ) ಅವರನ್ನು ನಿರಾಕರಿಸುತ್ತಿರುವರೇ?

اَمْ يَقُوْلُوْنَ بِهٖ جِنَّةٌ ؕ بَلْ جَآءَهُمْ
بِالْحَقِّ وَ اَكْثَرُهُمْ لِلْحَقِّ كٰرِهُوْنَ ﴿۷۰﴾

70. ಅಥವಾ ಅವರಿಗೆ ಹುಚ್ಚು ಹಿಡಿದಿದೆ ಎಂದು ಇವರು ಹೇಳುತ್ತಿರುವರೇ? ಇಲ್ಲ; ವಾಸ್ತವದಲ್ಲಿ ಅವರು ಸತ್ಯವನ್ನೇ ತಂದಿದ್ದಾರೆ ಮತ್ತು ಸತ್ಯವೇ ಅವರಲ್ಲಿ ಹೆಚ್ಚಿನವರಿಗೆ ಅಪ್ರಿಯವಾಗಿದೆ.

وَ لَوِ اتَّبَعَ الْحَقُّ اَهْوَآءَهُمْ لَفَسَدَتِ
السَّمٰوٰتُ وَ الْاَرْضُ وَ مَنْ فِيْهِنَّ ؕ
بَلْ اَتَيْنٰهُمْ بِذِكْرِهِمْ فَهُمْ عَنْ
ذِكْرِهِمْ مُّعْرِضُوْنَ ﴿۷۱﴾

71. ಒಂದು ವೇಳೆ ಸತ್ಯವು ಅವರ ಚಿತ್ತಾಕಾಂಕ್ಷೆಗಳನ್ನು ಹಿಂಬಾಲಿಸುತ್ತಿದ್ದರೆ ಭೂಮಿ-ಆಕಾಶಗಳ ಮತ್ತು ಅವುಗಳಲ್ಲಿರುವ ಸಕಲ ವಸ್ತುಗಳ ವ್ಯವಸ್ಥೆಯು ಅಸ್ತವ್ಯಸ್ತವಾಗಿ ಬಿಡುತ್ತಿತ್ತು. ಇಲ್ಲ, ವಾಸ್ತವದಲ್ಲಿ ನಾವು ಅವರ ಸ್ವಂತ 'ಬೋಧನೆ'ಯನ್ನೇ ಅವರ ಬಳಿಗೆ ತಂದಿದ್ದೇವೆ ಮತ್ತು ಅವರು ತಮ್ಮ 'ಬೋಧನೆ'ಯಿಂದ ವಿಮುಖರಾಗುತ್ತಿದ್ದಾರೆ.

اَمْ تَسْـَٔلُهُمْ خَرْجًا فَخَرَاجُ رَبِّكَ خَيْرٌ ۖۗ
وَّ هُوَ خَيْرُ الرّٰزِقِيْنَ ﴿۷۲﴾

72. ನೀವು ಅವರಿಂದೇನಾದರೂ ಬೇಡುತ್ತಿರುವಿರಾ? ನಿಮಗಂತೂ ನಿಮ್ಮ ಪ್ರಭುವಿನ ಕೊಡುಗೆಯೇ ಶ್ರೇಷ್ಠವಾಗಿದೆ ಮತ್ತು ಅವನು ಅತ್ಯುತ್ತಮ ಅನ್ನದಾತನಾಗಿದ್ದಾನೆ.

وَ اِنَّكَ لَتَدْعُوْهُمْ اِلٰى صِرَاطٍ
مُّسْتَقِيْمٍ ﴿۷۳﴾

73. ನೀವಂತು ಅವರನ್ನು ಸನ್ಮಾರ್ಗದ ಕಡೆಗೆ ಕರೆಯುತ್ತಿರುವಿರಿ.

وَ اِنَّ الَّذِيْنَ لَا يُؤْمِنُوْنَ بِالْاٰخِرَةِ
عَنِ الصِّرَاطِ لَنٰكِبُوْنَ ﴿۷۴﴾

74. ಆದರೆ, ಪರಲೋಕದ ಮೇಲೆ ವಿಶ್ವಾಸವಿರಿಸದವರು ಸನ್ಮಾರ್ಗದಿಂದ ಸರಿದು ನಡೆಯಲಿಚ್ಛಿಸುತ್ತಾರೆ.

وَ لَوْ رَحِمْنٰهُمْ وَ كَشَفْنَا مَا بِهِمْ مِّنْ
ضُرٍّ لَّلَجُّوْا فِيْ طُغْيَانِهِمْ يَعْمَهُوْنَ ﴿۷۵﴾

75. ನಾವು ಇವರ ಮೇಲೆ ದಯೆ ತೋರಿದರೆ ಹಾಗೂ ಇವರು ಇಂದು ಸಿಲುಕಿ ಬಿದ್ದಿರುವ ಸಂಕಷ್ಟವನ್ನು[8] ದೂರೀಕರಿಸಿದರೆ ಇವರು ತಮ್ಮ ಉದ್ಧಟತನದಲ್ಲಿ ಸಂಪೂರ್ಣ ದಾರಿಗೆಡುವರು.

وَ لَقَدْ اَخَذْنٰهُمْ بِالْعَذَابِ فَمَا
اسْتَكَانُوْا لِرَبِّهِمْ وَ مَا يَتَضَرَّعُوْنَ ﴿۷۶﴾

76. ಇವರ ಅವಸ್ಥೆಯೇನೆಂದರೆ ನಾವು ಇವರನ್ನು ಕಷ್ಟಕ್ಕೀಡು ಮಾಡಿದೆವು. ಆದರೂ ಇವರು ತಮ್ಮ ಪ್ರಭುವಿನ ಮುಂದೆ ಬಾಗಲಿಲ್ಲ ಮತ್ತು ವಿನಮ್ರತೆ ತೋರಲಿಲ್ಲ.

حَتّٰٓى اِذَا فَتَحْنَا عَلَيْهِمْ بَابًا ذَا عَذَابٍ
شَدِيْدٍ اِذَا هُمْ فِيْهِ مُبْلِسُوْنَ ﴿۷۷﴾

77. ಕೊನೆಗೆ ನಾವು ಅವರ ಪಾಲಿಗೆ ಕಠಿಣ ಯಾತನೆಯ ಬಾಗಿಲನ್ನು ತೆರೆದು ಬಿಟ್ಟಾಗ, ಇವರು ಆ ಸ್ಥಿತಿಯಲ್ಲಿ ಪ್ರತಿಯೊಂದು ಶುಭದ ಬಗ್ಗೆ ಹತಾತ್ತನೆ ನಿರಾಶರಾಗಿರುವುದನ್ನು ನೀವು ಕಾಣುವಿರಿ.

---

8. ಅರ್ಥಾತ್- ಪ್ರವಾದಿವರ್ಯರ(ಸ) ಪ್ರವಾದಿತ್ವದ ನಂತರ ಕೆಲವು ವರ್ಷಗಳ ಕಾಲ ಮುಂದುವರಿದಿದ್ದ ಕ್ಷಾಮ.

78. ನಿಮಗೆ ಶ್ರವಣಶಕ್ತಿ, ದೃಕ್ಶಕ್ತಿ ಮತ್ತು ವಿಚಾರ ಮಾಡಲು ಮನಸ್ಸು ನೀಡಿದವನು ಅಲ್ಲಾಹನೇ ತಾನೇ. ಆದರೆ ನೀವು ಅಲ್ಪವೇ ಕೃತಜ್ಞರಾಗುತ್ತೀರಿ.

وَهُوَ الَّذِيْٓ اَنْشَاَ لَكُمُ السَّمْعَ وَالْاَبْصَارَ
وَالْاَفْـِٕدَةَ ۭ قَلِيْلًا مَّا تَشْكُرُوْنَ ۝78

79. ನಿಮ್ಮನ್ನು ಭೂಮಿಯ ಮೇಲೆ ಹಬ್ಬಿಸಿ ಬಿಟ್ಟವನೂ ಅವನೇ. ಕೊನೆಗೆ ನೀವು ಅವನ ಕಡೆಗೇ ಒಟ್ಟುಗೂಡಿಸಲ್ಪಡುವಿರಿ.

وَهُوَ الَّذِيْ ذَرَاَكُمْ فِي الْاَرْضِ وَاِلَيْهِ
تُحْشَرُوْنَ ۝79

80. ಅವನೇ ಜೀವ ನೀಡುತ್ತಾನೆ ಮತ್ತು ಅವನೇ ಮರಣ ಕೊಡುತ್ತಾನೆ. ರಾತ್ರಿ-ಹಗಲುಗಳ ಆವರ್ತನವು ಅವನದೇ ಹಿಡಿತದಲ್ಲಿದೆ. ನಿಮಗೆ ಇದು ಅರ್ಥವಾಗುವುದಿಲ್ಲವೇ?

وَهُوَ الَّذِيْ يُحْيٖ وَيُمِيْتُ وَلَهُ اخْتِلَافُ
الَّيْلِ وَالنَّهَارِ ۭ اَفَلَا تَعْقِلُوْنَ ۝80

81. ಆದರೆ ಇವರು ಇವರ ಪೂರ್ವಜರು ಹೇಳಿದ್ದುದನ್ನೇ ಹೇಳುತ್ತಾರೆ-

بَلْ قَالُوْا مِثْلَ مَا قَالَ الْاَوَّلُوْنَ ۝81

82. "ನಾವು ಸತ್ತು ಮಣ್ಣು ಮತ್ತು ಅಸ್ಥಿಪಂಜರವಾಗಿ ಬಿಟ್ಟ ಬಳಿಕ ನಮ್ಮನ್ನು ಪುನಃ ಜೀವಂತಗೊಳಿಸಿ ಎಬ್ಬಿಸಲಾದೀತೇ?

قَالُوْٓا ءَاِذَا مِتْنَا وَكُنَّا تُرَابًا وَّعِظَامًا
ءَاِنَّا لَمَبْعُوْثُوْنَ ۝82

83. ಈ ವಾಗ್ದಾನಗಳನ್ನು ನಾವು ತುಂಬಾ ಕೇಳಿದ್ದೇವೆ ಮತ್ತು ನಮಗಿಂತ ಮುಂಚೆ ನಮ್ಮ ಪೂರ್ವಜರೂ ಕೇಳುತ್ತಲೇ ಬಂದಿದ್ದಾರೆ. ಇವೆಲ್ಲ ಹಳೆಯ ಕಟ್ಟುಕತೆಗಳಲ್ಲದೆ ಇನ್ನೇನೂ ಅಲ್ಲ" ಎಂದು ಇವರು ಹೇಳುತ್ತಾರೆ.

لَقَدْ وُعِدْنَا نَحْنُ وَاٰبَاۗؤُنَا هٰذَا مِنْ
قَبْلُ اِنْ هٰذَآ اِلَّآ اَسَاطِيْرُ الْاَوَّلِيْنَ ۝83

84. "ನೀವು ಬಲ್ಲವರಾಗಿದ್ದರೆ ಈ ಭೂಮಿ ಮತ್ತು ಇದರೊಳಗಿರುವುದೆಲ್ಲವೂ ಯಾರದೆಂದು ಹೇಳಿರಿ" ಎಂದು ಅವರೊಡನೆ ಕೇಳಿರಿ.

قُلْ لِّمَنِ الْاَرْضُ وَمَنْ فِيْهَآ
اِنْ كُنْتُمْ تَعْلَمُوْنَ ۝84

85. ಅವರು ಖಂಡಿತವಾಗಿಯೂ 'ಅಲ್ಲಾಹನದು' ಎನ್ನುವರು. "ಹಾಗಾದರೆ ನೀವು ಪ್ರಜ್ಞಾವಂತರಾಗುವುದಿಲ್ಲವೇ?" ಎಂದು ಕೇಳಿರಿ.

سَيَقُوْلُوْنَ لِلّٰهِ ۭ قُلْ اَفَلَا تَذَكَّرُوْنَ ۝85

86. ಸಪ್ತಗಗನಗಳ ಮತ್ತು ಮಹಾ ಸಿಂಹಾಸನದ ಒಡೆಯನಾರೆಂದು ಇವರನ್ನು ಕೇಳಿರಿ.

قُلْ مَنْ رَّبُّ السَّمٰوٰتِ السَّبْعِ وَ
رَبُّ الْعَرْشِ الْعَظِيْمِ ۝86

87. ಅವರು ಖಂಡಿತವಾಗಿಯೂ 'ಅಲ್ಲಾಹನೇ' ಎನ್ನುವರು. ಹಾಗಾದರೆ ನೀವೇಕೆ ಭಯಪಡುವುದಿಲ್ಲವೆಂದು ಕೇಳಿರಿ.

سَيَقُوْلُوْنَ لِلّٰهِ ۭ قُلْ اَفَلَا تَتَّقُوْنَ ۝87

88. ಅವರೊಡನೆ ಕೇಳಿರಿ; "ಸಕಲ ವಸ್ತುಗಳ ಮೇಲೆ ಯಾರ ಪ್ರಭುತ್ವವಿದೆ? ಎಲ್ಲರಿಗೂ ಆಶ್ರಯ ನೀಡುವವನೂ ಅವನ ವಿರುದ್ಧ

قُلْ مَنْ بِيَدِهٖ مَلَكُوْتُ كُلِّ شَيْءٍ
وَّهُوَ يُجِيْرُ وَلَا يُجَارُ عَلَيْهِ اِنْ

ಆಶ್ರಯ ನೀಡಲು ಯಾರಿಗೂ ಸಾಧ್ಯವಿಲ್ಲದಂತಹವನೂ ಯಾರು? ನಿಮಗೆ ಗೊತ್ತಿದ್ದರೆ ಹೇಳಿರಿ."

كُنتُمْ تَعْلَمُونَ ﴿٨٨﴾

89. ಅವರು ಖಂಡಿತವಾಗಿಯೂ "ಈ ಗುಣಗಳು ಅಲ್ಲಾಹನಿಗೇ ಇವೆ" ಎಂದು ಹೇಳುವರು. "ಹಾಗಾದರೆ ನೀವು ಮೋಸ ಹೋಗುವುದು ಹೇಗೆ?" ಎಂದು ಕೇಳಿರಿ.

سَيَقُولُونَ لِلَّهِ ۚ قُلْ فَأَنَّىٰ تُسْحَرُونَ ﴿٨٩﴾

90. ಸತ್ಯವೇನಿದೆಯೋ ಅದನ್ನು ನಾವು ಅವರ ಮುಂದೆ ತಂದಿದ್ದೇವೆ. ಇವರು ಸುಳ್ಳುಗಾರರೆಂಬುದರಲ್ಲಿ ಏನೂ ಸಂಶಯವಿಲ್ಲ.[9]

بَلْ أَتَيْنَاهُم بِالْحَقِّ وَإِنَّهُمْ لَكَاذِبُونَ ﴿٩٠﴾

91. ಅಲ್ಲಾಹನು ಯಾರನ್ನೂ ತನ್ನ ಮಕ್ಕಳನ್ನಾಗಿ ಮಾಡಿಲ್ಲ.[10] ಅವನ ಜತೆ ಇನ್ನೊಬ್ಬ ದೇವನೂ ಇಲ್ಲ. ಹಾಗಿರುತ್ತಿದ್ದರೆ ಪ್ರತಿಯೊಬ್ಬ ದೇವನೂ ತನ್ನ ಸೃಷ್ಟಿಯನ್ನು ತೆಗೆದು ಕೊಂಡು ಬೇರೆ ಹೋಗಿ ಬಿಡುತ್ತಿದ್ದನು. ಆ ಬಳಿಕ ಅವರು ಒಬ್ಬರ ಮೇಲೆ ಇನ್ನೊಬ್ಬರು ಆಕ್ರಮಣ ನಡೆಸುತ್ತಿದ್ದರು. ಇವರು ಆಡುವ ಮಾತುಗಳಿಂದೆಲ್ಲಾ ಅಲ್ಲಾಹನು ಪರಿಶುದ್ಧನಾಗಿರುತ್ತಾನೆ.

مَا اتَّخَذَ اللَّهُ مِن وَلَدٍ وَمَا كَانَ
مَعَهُ مِنْ إِلَٰهٍ ۚ إِذًا لَّذَهَبَ كُلُّ إِلَٰهٍ
بِمَا خَلَقَ وَلَعَلَا بَعْضُهُمْ عَلَىٰ بَعْضٍ ۚ
سُبْحَانَ اللَّهِ عَمَّا يَصِفُونَ ﴿٩١﴾

92. ಅವನು ರಹಸ್ಯವಾಗಿರುವುದನ್ನೂ ಬಹಿರಂಗ ವಾಗಿರುವುದನ್ನೂ ಬಲ್ಲವನು. ಇವರು ಮಾಡುತ್ತಿರುವ 'ದೇವಸಹಭಾಗಿತ್ವ'ದಿಂದ ಅವನು ಉನ್ನತನಾಗಿರುತ್ತಾನೆ.

عَالِمِ الْغَيْبِ وَالشَّهَادَةِ فَتَعَالَىٰ
عَمَّا يُشْرِكُونَ ﴿٩٢﴾

93. ಸಂದೇಶವಾಹಕರೇ, ಹೀಗೆ ಪ್ರಾರ್ಥಿಸಿರಿ, "ನನ್ನ ಪ್ರಭೂ, ಇವರಿಗೆ ಎಚ್ಚರಿಕೆ ನೀಡಲಾಗುತ್ತಿರುವ ಆ ಯಾತನೆಯನ್ನು ನೀನು ನನ್ನ ಉಪಸ್ಥಿತಿಯಲ್ಲೇ ತಂದರೆ-

قُل رَّبِّ إِمَّا تُرِيَنِّي مَا يُوعَدُونَ ﴿٩٣﴾

9. ಅರ್ಥಾತ್- ಅಲ್ಲಾಹನ ಹೊರತು ಇತರರಿಗೂ ದೇವತ್ವದ ಗುಣ, ಅಧಿಕಾರ ಮತ್ತು ಹಕ್ಕುಗಳಿವೆ ಎಂಬ ಮಾತಿನಲ್ಲಿ ಅವರು ಸುಳ್ಳರಾಗಿದ್ದಾರೆ. ಮರಣೋತ್ತರ ಜೀವನವಿಲ್ಲವೆಂಬ ಮಾತಿನಲ್ಲೂ ಅವರು ಸುಳ್ಳರಾಗಿದ್ದಾರೆ. ಅವರು ಸಮ್ಮತಿಸುವಂತಹ ವಿಚಾರಗಳಿಂದಲೇ ಅವರ ಸುಳ್ಳು ಸಾಬೀತಾಗುತ್ತದೆ. ಒಂದೆಡೆ ಭೂಮಿ-ಆಕಾಶಗಳ ಒಡೆಯ ಮತ್ತು ನಿಸರ್ಗದ ಪ್ರತಿಯೊಂದು ವಸ್ತುವಿನ ಪರಮಾಧಿಕಾರಿ ಅಲ್ಲಾಹನಾಗಿದ್ದಾನೆ ಎಂದು ಅವರು ನಂಬುತ್ತಾರೆ. ಇನ್ನೊಂದೆಡೆ ದೇವತ್ವ ಅವನಿಗೆ ಮಾತ್ರ ಸೀಮಿತವಲ್ಲ, ಇತರರಿಗೂ (ಸಹಜವಾಗಿ ಅವರು ಅಲ್ಲಾಹನ ಸೃಷ್ಟಿಗಳು ಮತ್ತು ದಾಸರು) ಅದರಲ್ಲಿ ಪಾಲಿದೆ ಎನ್ನುತ್ತಾರೆ. ಈ ಎರಡು ಮಾತುಗಳು ವಿರೋಧಾಭಾಸದಿಂದ ಕೂಡಿದೆ. ಹೀಗೆ ಒಂದೆಡೆ- ನಮ್ಮನ್ನೂ ಈ ಭವ್ಯ ನಿಸರ್ಗವನ್ನೂ ದೇವನೇ ಸೃಷ್ಟಿಸಿದ್ದಾನೆ ಎಂದು ಹೇಳುವುದು, ಮತ್ತೊಂದೆಡೆ ತಾನೇ ಸೃಷ್ಟಿಸಿದ ಸೃಷ್ಟಿಗಳನ್ನು ಅವನು ಪುನರಪಿ ಸೃಷ್ಟಿಸಲಾರನು ಎಂದು ಹೇಳುವುದು ಬುದ್ಧಿಗೆ ನಿಲುಕದಂತಹ ವಿಚಾರವಾಗಿದೆ. ಆದ್ದರಿಂದ ಅವರ ವಿಶ್ವಾಸ ಶ್ರದ್ಧೆಗಳಿಂದಲೇ ಅವರು ಮಾಡುತ್ತಿರುವ ಬಹುದೇವಾರಾಧನೆ ಮತ್ತು ಪರಲೋಕ ನಿರಾಕರಣೆ ಮಿಥ್ಯ ವಿಶ್ವಾಸಗಳಾಗಿವೆ ಎಂದು ವ್ಯಕ್ತವಾಗುತ್ತದೆ.

10. ಇದನ್ನು ಕೇವಲ ಕ್ರೈಸ್ತರ ನಂಬಿಕೆಯನ್ನು ನಿರಾಕರಿಸಲಿಕ್ಕಾಗಿ ಹೇಳಲಾಗಿದೆ ಎಂಬ ತಪ್ಪುಕಲ್ಪನೆಗೆ ಯಾರೂ ಒಳಗಾಗಬಾರದು. ಅರೇಬಿಯಾದ ಬಹುದೇವವಿಶ್ವಾಸಿಗಳೂ ತಮ್ಮ ಆರಾಧ್ಯರುಗಳನ್ನು ದೇವಪುತ್ರರೆಂದು ಹೇಳುತ್ತಿದ್ದರು. ಲೋಕದ ಹೆಚ್ಚಿನ ಬಹುದೇವವಿಶ್ವಾಸಿಗಳು ಈ ಪಥಭ್ರಷ್ಟತೆಯಲ್ಲಿ ಅವರ ಜತೆಗಿದ್ದಾರೆ.

94. ಓ ನನ್ನ ಪ್ರಭೂ! ನನ್ನನ್ನು ಈ ಅಕ್ರಮಿಗಳಲ್ಲಿ ಸೇರಿಸಬೇಡ."[11]

رَبِّ فَلَا تَجْعَلْنِي فِي الْقَوْمِ الظَّالِمِينَ ﴿٩٤﴾

95. ವಾಸ್ತವದಲ್ಲಿ ನಾವು ಅವರಿಗೆ ಎಚ್ಚರಿಕೆ ನೀಡುತ್ತಿರುವ ಆ ವಸ್ತುವನ್ನು ನಿಮ್ಮ ಕಣ್ಣ ಮುಂದೆಯೇ ತಂದು ಬಿಡುವ ಪೂರ್ಣ ಸಾಮರ್ಥ್ಯ ಹೊಂದಿದ್ದೇವೆ.

وَإِنَّا عَلَىٰ أَن نُّرِيَكَ مَا نَعِدُهُمْ لَقَادِرُونَ ﴿٩٥﴾

96. ಸಂದೇಶವಾಹಕರೇ, ಕೆಡುಕನ್ನು ಅತ್ಯುತ್ತಮ ವಿಧಾನದಿಂದ ನೀಗಿಸಿರಿ. ನಿಮ್ಮ ಮೇಲೆ ಅವರು ಹೊರಿಸುತ್ತಿರುವ ಆರೋಪಗಳನ್ನು ನಾವು ಚೆನ್ನಾಗಿ ಬಲ್ಲೆವು.

ادْفَعْ بِالَّتِي هِيَ أَحْسَنُ السَّيِّئَةَ ۚ نَحْنُ أَعْلَمُ بِمَا يَصِفُونَ ﴿٩٦﴾

97. ಮತ್ತು ಹೀಗೆ ಪ್ರಾರ್ಥಿಸಿರಿ, "ನನ್ನ ಪ್ರಭೂ, ನಾನು ಶೈತಾನರ ದುಷ್ಪ್ರೇರಣೆಗಳಿಂದ ನಿನ್ನ ಅಭಯ ಯಾಚಿಸುತ್ತೇನೆ.

وَقُل رَّبِّ أَعُوذُ بِكَ مِنْ هَمَزَاتِ الشَّيَاطِينِ ﴿٩٧﴾

98. ನನ್ನ ಪ್ರಭೂ, ಅವರು ನನ್ನ ಬಳಿ ಸುಳಿಯುವುದರಿಂದಲೂ ನಾನು ನಿನ್ನ ಅಭಯ ಯಾಚಿಸುತ್ತೇನೆ."

وَأَعُوذُ بِكَ رَبِّ أَن يَحْضُرُونِ ﴿٩٨﴾

99. ಇವರಲ್ಲಿ ಯಾರಿಗಾದರೂ ಮರಣ ಬಂದಾಗ, "ನನ್ನ ಪ್ರಭೂ ನಾನು ಬಿಟ್ಟು ಬಂದ ಲೋಕಕ್ಕೆ ನನ್ನನ್ನು ಮರಳಿ ಕಳುಹಿಸಿ ಬಿಡು.

حَتَّىٰ إِذَا جَاءَ أَحَدَهُمُ الْمَوْتُ قَالَ رَبِّ ارْجِعُونِ ﴿٩٩﴾

100. ಇನ್ನು ನಾನು ಸತ್ಕರ್ಮ ವೆಸಗುವ ನಿರೀಕ್ಷೆ ಇದೆ" ಎಂದು ಹೇಳಲಾರಂಭಿಸುವ ವರೆಗೂ (ಇವರು ತಮ್ಮ ಕುಕೃತ್ಯವನ್ನು ಬಿಡಲಾರರು), ಎಷ್ಟು ಮಾತ್ರಕ್ಕೂ ಹಾಗಾಗದು. ಇದು ಕೇವಲ ಅವನಾಡುವ ಮಾತು. (ಸಾಯುವ) ಇವರೆಲ್ಲರ ಹಿಂದೆ, ಇನ್ನೊಂದು ಜೀವನದ ದಿನದ ವರೆಗೆ 'ಬರ್ಝಖ್'[12] (ಮಧ್ಯಂತರ ಕಾಲಾವಧಿ) ಅಡ್ಡ ಇದೆ.

لَعَلِّي أَعْمَلُ صَالِحًا فِيمَا تَرَكْتُ ۚ كَلَّا ۚ إِنَّهَا كَلِمَةٌ هُوَ قَائِلُهَا ۖ وَمِن وَرَائِهِم بَرْزَخٌ إِلَىٰ يَوْمِ يُبْعَثُونَ ﴿١٠٠﴾

101. ತರುವಾಯ ಕಹಳೆ ಊದಲ್ಪಟ್ಟಾಗ ಅಂದು ಅವರ ನಡುವೆ

فَإِذَا نُفِخَ فِي الصُّورِ فَلَا أَنسَابَ

---

11. ಇದರ ಅರ್ಥ ಪ್ರವಾದಿವರ್ಯರೂ(ಸ) ಆ ದೇವ ಯಾತನೆಗೆ ಈಡಾಗಿ ಬಿಡುವ ಅಪಾಯವಿತ್ತು (ಶಾಂತಂ ಪಾಪಂ) ಎಂದಲ್ಲ. ಅಥವಾ ಹೀಗೆ ಪ್ರಾರ್ಥಿಸದಿದ್ದರೆ ಅವರು ಯಾತನೆಗೆ ಗುರಿಯಾಗಬಹುದು ಎಂಬುದೂ ಇದರ ಅರ್ಥವಲ್ಲ. ದೇವಯಾತನೆ ಅತ್ಯಂತ ಭಯಪಡಬೇಕಾದ ವಿಷಯವಾಗಿದೆ. ಅದು ಎಷ್ಟು ಭಯಾನಕವಾಗಿರುತ್ತದೆಂದರೆ ಪಾಪಿಗಳು ಮಾತ್ರವಲ್ಲ ಉತ್ತಮ ವ್ಯಕ್ತಿಗಳೂ ತಮ್ಮೆಲ್ಲಾ ಒಳಿತಿನ ಹೊರತಾಗಿಯೂ ಅದರಿಂದ ಅಭಯ ಯಾಚಿಸಬೇಕಾಗಿದೆ ಎಂಬ ಕಲ್ಪನೆಯನ್ನು ಮೂಡಿಸಲಿಕ್ಕಾಗಿ ಈ ವಿವರಣಾ ಶೈಲಿಯನ್ನು ಅನುಸರಿಸಲಾಗಿದೆ.

12. ಬರ್ಝಕ್ ಎಂದರೆ 'ಪರ್ದಾ' ಎಂಬ ಫಾರ್ಸೀ ಪದದ ಅರಬಿ ರೂಪಾಂತರ. ಸೂಕ್ತದ ಅರ್ಥವೇನೆಂದರೆ ಅವರ ಮತ್ತು ಲೋಕದ ನಡುವೆ ಅವರನ್ನು ಹಿಂದಿರುಗಲು ಬಿಡದಂತಹ ಒಂದು ತಡೆ ಇದೆ. ನಿರ್ಣಾಯಕ ದಿನದ ತನಕವೂ ಅವರು ಇಹಲೋಕ ಮತ್ತು ಪರಲೋಕದ ನಡುವಿನ ಈ ಗಡಿಯಲ್ಲೇ ನಿಂತುಕೊಂಡಿರುವರು.

ಯಾವುದೇ ಸಂಬಂಧ ಉಳಿಯಲಾರದು ಮತ್ತು ಅವರು ಪರಸ್ಪರರನ್ನು ವಿಚಾರಿಸಿಯೂ ನೋಡಲಾರರು.

بَيْنَهُمْ يَوْمَئِذٍ وَّلَا يَتَسَآءَلُوْنَ ﴿١٠١﴾

102. ಆಗ ಯಾರ ತಕ್ಕಡಿಯ ತಟ್ಟೆಯು ಭಾರವಾಗಿರುವುದೋ ಅವರೇ ವಿಜಯಿಗಳಾಗುವರು.

فَمَنْ ثَقُلَتْ مَوَازِيْنُهٗ فَاُولٰٓئِكَ
هُمُ الْمُفْلِحُوْنَ ﴿١٠٢﴾

103. ಯಾರ ತಟ್ಟೆ ಹಗುರವಿರುವುದೋ ಅವರೇ ತಮ್ಮನ್ನು ತಾವೇ ನಷ್ಟಕ್ಕೊಳಪಡಿಸಿ ಕೊಂಡವರಾಗಿರುವರು. ಅವರು ಸದಾ ಕಾಲ ನರಕದಲ್ಲಿರುವರು.

وَمَنْ خَفَّتْ مَوَازِيْنُهٗ فَاُولٰٓئِكَ الَّذِيْنَ
خَسِرُوْٓا اَنْفُسَهُمْ فِيْ جَهَنَّمَ خٰلِدُوْنَ ﴿١٠٣﴾

104. ಅಗ್ನಿಯು ಅವರ ಮುಖದ ಚರ್ಮವನ್ನು ನೆಕ್ಕಿ ಬಿಡುವುದು ಮತ್ತು ಅವರ ದವಡೆಗಳು ಹೊರಕ್ಕೆ ಬಂದು ಬಿಡುವುವು.

تَلْفَحُ وُجُوْهَهُمُ النَّارُ وَهُمْ فِيْهَا كٰلِحُوْنَ ﴿١٠٤﴾

105. "ನನ್ನ ವಚನಗಳನ್ನು ನಿಮಗೆ ಓದಿ ಹೇಳಿದಾಗ ಅದನ್ನು ಸುಳ್ಳಾಗಿಸುತ್ತಿದ್ದವರು ನೀವೇ ಅಲ್ಲವೇ?" (ಎಂದು ಅವರನ್ನು ಕೇಳಲಾಗುವುದು)

اَلَمْ تَكُنْ اٰيٰتِيْ تُتْلٰى عَلَيْكُمْ فَكُنْتُمْ
بِهَا تُكَذِّبُوْنَ ﴿١٠٥﴾

106. ಆಗ ಅವರು, "ನಮ್ಮ ಪ್ರಭೂ, ನಮ್ಮ ದುರದೃಷ್ಟವು ನಮ್ಮನ್ನು ಆವರಿಸಿಕೊಂಡಿತ್ತು. ನಿಜಕ್ಕೂ ನಾವು ಪಥಭ್ರಷ್ಟರಾಗಿದ್ದೆವು.

قَالُوْا رَبَّنَا غَلَبَتْ عَلَيْنَا شِقْوَتُنَا
وَكُنَّا قَوْمًا ضَآلِّيْنَ ﴿١٠٦﴾

107. ನಮ್ಮ ಪ್ರಭೂ, ಇನ್ನು ನಮ್ಮನ್ನು ಇಲ್ಲಿಂದ ವಿಮೋಚಿಸಿ ಬಿಡು. ಆ ಬಳಿಕವೂ ನಾವು ಇಂತಹ ಅಪರಾಧ ಮಾಡಿದರೆ ಅಕ್ರಮಿ ಗಳಾಗುವೆವು" ಎನ್ನುವರು.

رَبَّنَآ اَخْرِجْنَا مِنْهَا فَاِنْ عُدْنَا
فَاِنَّا ظٰلِمُوْنَ ﴿١٠٧﴾

108. ಆಗ ಅಲ್ಲಾಹನು, "ತೊಲಗಿರಿ, ಅದರಲ್ಲೇ ಬಿದ್ದು ಕೊಂಡಿರಿ ಮತ್ತು ನನ್ನೊಡನೆ ಮಾತನಾಡ ಬೇಡಿರಿ."

قَالَ اخْسَئُوْا فِيْهَا وَلَا تُكَلِّمُوْنِ ﴿١٠٨﴾

109. ನನ್ನ ಕೆಲವು ಮಂದಿ ದಾಸರು, "ನಮ್ಮ ಪ್ರಭೂ ನಾವು ವಿಶ್ವಾಸ ವಿರಿಸಿದೆವು. ನಮ್ಮನ್ನು ಕ್ಷಮಿಸಿ ಬಿಡು, ನಮ್ಮ ಮೇಲೆ ದಯೆ ತೋರು, ನೀನು ಅತ್ಯುತ್ತಮ ಕರುಣಾನಿಧಿ ಆಗಿರುತ್ತೀ" ಎಂದು ಹೇಳುತ್ತಿದ್ದಾಗ-

اِنَّهٗ كَانَ فَرِيْقٌ مِّنْ عِبَادِيْ يَقُوْلُوْنَ
رَبَّنَآ اٰمَنَّا فَاغْفِرْ لَنَا وَارْحَمْنَا وَاَنْتَ
خَيْرُ الرّٰحِمِيْنَ ﴿١٠٩﴾

110. "ನೀವು ಅವರನ್ನು ಅಪಹಾಸ್ಯ ಮಾಡಿದಿರಿ. ಅವರ ಮೇಲಿನ ಹಠವು ನಿಮ್ಮನ್ನು ನನ್ನ ಅಸ್ತಿತ್ವವನ್ನೇ ಮರೆಯುವಂತೆ ಮಾಡಿತು ಮತ್ತು ನೀವು ಅವರನ್ನು ಕಂಡು ನಗುತ್ತಿದ್ದಿರಿ.

فَاتَّخَذْتُمُوْهُمْ سِخْرِيًّا حَتّٰٓى اَنْسَوْكُمْ
ذِكْرِيْ وَكُنْتُمْ مِّنْهُمْ تَضْحَكُوْنَ ﴿١١٠﴾

111. ಇಂದು ನಾನು ಅವರ ಸಹನೆಗೆ ಕೊಟ್ಟ ಫಲವೇನೆಂದರೆ ಅವರೇ ಯಶಸ್ವಿಗಳಾಗಿದ್ದಾರೆ" ಎಂದು ಉತ್ತರ ಕೊಡುವನು.

إِنِّي جَزَيْتُهُمُ الْيَوْمَ بِمَا صَبَرُوا أَنَّهُمْ هُمُ الْفَائِزُونَ ﴿١١١﴾

112. ಅನಂತರ ಅಲ್ಲಾಹನು ಅವರೊಡನೆ; "ಭೂಮಿಯಲ್ಲಿ ನೀವು ಎಷ್ಟು ವರ್ಷ ವಾಸಿಸಿದಿರಿ?" ಎಂದು ಕೇಳುವನು.

قَالَ كَمْ لَبِثْتُمْ فِي الْأَرْضِ عَدَدَ سِنِينَ ﴿١١٢﴾

113. ಅದಕ್ಕೆ ಅವರು, "ಒಂದು ದಿನ ಅಥವಾ ದಿನದ ಒಂದಂಶ ನಾವು ಅಲ್ಲಿ ವಾಸಿಸುತ್ತಿದ್ದೆವು, ಎಣಿಕೆ ಮಾಡುವವರನ್ನು ಕೇಳಿ ನೋಡಿ" ಎನ್ನುವರು.

قَالُوا لَبِثْنَا يَوْمًا أَوْ بَعْضَ يَوْمٍ فَاسْأَلِ الْعَادِّينَ ﴿١١٣﴾

114. ಆಗ, "ಸ್ವಲ್ಪ ಹೊತ್ತೇ ತಂಗಿದ್ದಿರಷ್ಟೆ, ನೀವು ಅದನ್ನು ಆಗ ತಿಳಿದಿರುತ್ತಿದ್ದರೆ!

قَالَ إِن لَّبِثْتُمْ إِلَّا قَلِيلًا لَّوْ أَنَّكُمْ كُنتُمْ تَعْلَمُونَ ﴿١١٤﴾

115. ನೀವೇನು ನಾವು ನಿಮ್ಮನ್ನು ನಿರರ್ಥಕವಾಗಿ ಸೃಷ್ಟಿಸಿದ್ದೇವೆಂದೂ ನಿಮಗೆ ನಮ್ಮ ಕಡೆಗೆ ಮರಳಲಿಕ್ಕೆ ಇಲ್ಲವೆಂದೂ ತಿಳಿದು ಕೊಂಡಿದ್ದೀರಾ?" ಎಂದು ಹೇಳಲಾಗುವುದು.

أَفَحَسِبْتُمْ أَنَّمَا خَلَقْنَاكُمْ عَبَثًا وَأَنَّكُمْ إِلَيْنَا لَا تُرْجَعُونَ ﴿١١٥﴾

116. ಅಲ್ಲಾಹನು ಸರ್ವೋನ್ನತನು. ಯಥಾರ್ಥ ಸಾರ್ವಭೌಮನು. ಅವನ ಹೊರತು ಇನ್ನಾವ ದೇವನೂ ಇಲ್ಲ. ಮಹಾ ವಿಶ್ವಸಿಂಹಾಸನದ ಒಡೆಯ.

فَتَعَالَى اللَّهُ الْمَلِكُ الْحَقُّ ۖ لَا إِلَٰهَ إِلَّا هُوَ رَبُّ الْعَرْشِ الْكَرِيمِ ﴿١١٦﴾

117. ಯಾರಾದರೂ ಅಲ್ಲಾಹನ ಜೊತೆಗೆ ಯಾವುದೇ ಆಧಾರ ಪ್ರಮಾಣಗಳಿಲ್ಲದ ಆರಾಧ್ಯನನ್ನು ಪ್ರಾರ್ಥಿಸಿದರೆ[13] ಅವನ ಲೆಕ್ಕಾಚಾರ ಅವನ ಪ್ರಭುವಿನ ಬಳಿಯಲ್ಲಿದೆ. ಇಂತಹ ಸತ್ಯನಿಷೇಧಿಗಳು ಎಂದೆಂದಿಗೂ ಯಶಸ್ವಿಯಾಗಲಾರರು.

وَمَن يَدْعُ مَعَ اللَّهِ إِلَٰهًا آخَرَ لَا بُرْهَانَ لَهُ بِهِ فَإِنَّمَا حِسَابُهُ عِندَ رَبِّهِ ۚ إِنَّهُ لَا يُفْلِحُ الْكَافِرُونَ ﴿١١٧﴾

118. ಪೈಗಂಬರರೇ, ಹೇಳಿರಿ; "ನನ್ನೊಡೆಯಾ, ಕ್ಷಮಿಸು ಮತ್ತು ಕರುಣೆ ತೋರು; ನೀನು ಸಕಲ ಕರುಣಾಳುಗಳಿಗಿಂತಲೂ ಉತ್ತಮ ಕರುಣಾಮಯಿಯಾಗಿರುತ್ತೀ."

وَقُل رَّبِّ اغْفِرْ وَارْحَمْ وَأَنتَ خَيْرُ الرَّاحِمِينَ ﴿١١٨﴾

---

13. ಇನ್ನೊಂದು ಭಾಷಾಂತರ ಹೀಗಾಗಬಹುದು, "ಯಾರಾದರೂ ಅಲ್ಲಾಹನ ಜತೆಗೆ ಇತರ ಆರಾಧ್ಯರನ್ನು ಕರೆದು ಪ್ರಾರ್ಥಿಸಿದರೆ ಅವನ ಆ ಕಾರ್ಯಕ್ಕೆ ಪರವಾದ ಯಾವ ಪುರಾವೆಯೂ ಅವನಿಗಿರಲಾರದು."